ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ನಿಜ.

ಆ) 1965-66ರಲ್ಲಿ ಶರಾವತಿ ಯೋಜನೆಯನ್ನು ಕೈಗೆತ್ತಿಕೊಂಡಾಗ ಈ ಮಾರ್ಗ ಮುಳುಗಡೆಯಾಗಿರುತ್ತದೆ. ಈಗ ಹಸಿರುಮಗ್ಗಿಯಿಂದ ಸಾಗರಕ್ಕೆ ಲಾಂಚ್‌ನಲ್ಲಿ ದ್ಹಾಟಿ ರಸ್ತೆ ಮೂಲಕ ಸೇರಲು 25.00 ಕಿ.ಮೀ. ದೂರವಿರುತ್ತದೆ.

ಇ) ಲಾಂಚ್‌ನ್ನು ಬಳಸಿದರೆ ಹಸಿರುಮಗ್ಗಿಯಿಂದ ಸಾಗರಕ್ಕೆ 25.00 ಕಿ.ಮೀ. ಆಗುತ್ತದೆ. ಹಾಗೂ ರಸ್ತೆ ಮುಖಾಂತರ ಅಂದರೆ ಆಡುಗೋಡಿ-ನಗರ-ಹೊಸನಗರ-ಸಾಗರ ಮಾರ್ಗದಲ್ಲಿ 85.00 ಕಿ.ಮೀ. ದೂರವಾಗುತ್ತದೆ.

ಈ) ಸಧ್ಯದಲ್ಲಿ ಈ ಸೇತುವೆ ನಿರ್ಮಿಸುವ ಯಾವ ಪ್ರಸ್ತಾವನೆಯೂ ಇರುವುದಿಲ್ಲ. ಸುಮಾರು 1.50 ಕಿ.ಮೀ. ಉದ್ದದ ಈ ಸೇತುವೆಯನ್ನು ನಿರ್ಮಿಸಲು ಸುಮಾರು 60 ಕೋಟಿ ರೂ. ಬೇಕಾಗಬಹುದು.

ಪಶು ವೈದ್ಯಾಧಿಕಾರಿಗಳ ನೇಮಕಾತಿ

990 - ಶ್ರೀ ಆಯನೂರು ಮಂಜುನಾಥ್ (ಹೊಸನಗರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಾಲಿ ಎಷ್ಟು ಪಶುವೈದ್ಯ ಶಾಲೆಗಳಿವೆ, ಅವುಗಳಲ್ಲಿ ಪಶುವೈದ್ಯರೇ ಇಲ್ಲದ ಪಶು ಚಿಕಿತ್ಸಾಲಯಗಳೆಷ್ಟು?

ಆ) 5-7-95ರಂದು 393 ಪಶುವೈದ್ಯಾಧಿಕಾರಿಗಳ ಹುದ್ದೆಗಳಿಗೆ ಆರ್ಜಿಯನ್ನು ಸರ್ಕಾರವು ಕರೆದದ್ದು ನಿಜವೇ; ಹಾಗಿದ್ದಲ್ಲಿ ಯಾವ ಕಾರಣಕ್ಕಾಗಿ19-8-95ರಂದು ರದ್ದುಪಡಿಸಲಾಗಿದೆ?

ಇ) ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಕೇವಲ 200 ಹುದ್ದೆಗಳಿಗೆ ಆರ್ಜಿ ಕರೆಯಲು ಸರ್ಕಾರ ಸೂಚಿಸಿರುವುದು ನಿಜವೇ; ಹಾಗಿದ್ದಲ್ಲಿ ಖಾಲಿ ಸ್ಥಾನಗಳಿಗೆ ಸರ್ಕಾರ ಯಾವ ಕ್ರಮಕೈಗೊಳ್ಳಲಿದೆ?

ಈ) ರಾಜ್ಯದಲ್ಲಿ ಎಷ್ಟು ಪಶುವೈದ್ಯಾಧಿಕಾರಿ ಹುದ್ದೆ ಖಾಲಿ ಇದೆ. ನಿರುದ್ಯೋಗಿ ಪಶುವೈದ್ಯಾಧಿಕಾರಿಗಳು ಎಷ್ಟು ಜನರಿದ್ದಾರೆ?

ಉ) ನಿರುದ್ಯೋಗಿ ವೈದ್ಯಾಧಿಕಾರಿಗಳು ವಯೋಮಿತಿ ಮೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 1) 700

2) 142 ಪಶುವೈದ್ಯ ಶಾಲೆಗಳಲ್ಲಿ ಪಶುವೈದ್ಯಾಧಿಕಾರಿಗಳು ಇರುವುದಿಲ್ಲ.

ಅ) 1) ಹೌದು

2) ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಪಶುವೈದ್ಯಾಧಿಕರಿಗಳ ಸೇವೆಯನ್ನು ಸಕ್ರಮಗೊಳಿಸಲು ಸರ್ಕಾರ ತೀರ್ಮಾನಿಸಿದ ಕಾರಣ.

ಇ) 1) ಹೌದು.

2) 200 ಹುದ್ದೆಗಳನ್ನು ಹೊರತುಪಡಿಸಿ ಯಾವುದೇ ಹುದ್ದೆಗಳು ಖಾಲಿ ಇರುವುದಿಲ್ಲ.

ಈ) 1) 204 ಪಶುವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇದೆ.

2) 378 ನಿರುದ್ಯೋಗಿ ಪಶುವೈದ್ಯಾಧಿಕಾರಿಗಳಿರುತ್ತಾರೆ.

ಉ) 1) ಬಂದಿದೆ

2) ಇಲಾಖೆಯಲ್ಲಿ ಖಾಲಿಯಾಗಿರುವ ಪಶುವೈದ್ಯಾಧಿಕಾರಿ ಹುದ್ದೆಗಳಿಗೆ ನಿಯಮಾನುಸಾರ ನಿರುದ್ಯೋಗಿ ಪಶುವೈದ್ಯಾಧಿಕಾರಿಗಳಿಂದ ಭರ್ತಿ ಮಾಡಲಾಗುವುದು.

ಮೈಸೂರಿನಲ್ಲಿರುವ ರಂಗಾಯಣ ಕುರಿತು

992 - ಶ್ರೀ ಆಯನೂರು ಮಂಜುನಾಥ್ (ಹೊಸನಗರ) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನಲ್ಲಿರುವ ರಂಗಾಯಣ ಸರ್ಕಾರದಿಂದ ರಚಿತವಾದ ಸಂಸ್ಥೆಯೇ? ಇದರಲ್ಲಿ ಎಷ್ಟು ಜನ ಕಲಾವಿದರು ಹಾಗೂ ನೌಕರರು ಇದ್ದಾರೆ? ಯಾವ ಉದ್ದೇಶಕ್ಕೆ ಸ್ಥಾಪನೆ ಮಾಡಲಾಗಿದೆ?

ಆ) ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆಯೇ? ಹಾಗಾದಲ್ಲಿ ವಾರ್ಷಿಕ ಎಷ್ಟು ಅನುದಾನ ನೀಡಲಾಗುತ್ತಿದೆ? ಮಾನದಂಡವೇನು?

ಇ) ರಂಗಾಯಣದ ಕಲಾವಿದರನ್ನು ಯಾವ ರೀತಿ ಬಳಸಿಕೊಳ್ಳಲಾಗುತ್ತಿದೆ? ಈ ಕಲಾವಿದರನ್ನು ಎಲ್ಲಾ ಜಿಲ್ಲಾ ಕೇಂದ್ರಗಳಿಗೆ ನೇಮಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ? ಹಾಗಿದ್ದಲ್ಲಿ ರೂಪರೇಷೆಗಳೇನು?

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಹಾಗೂ ಸಂಸ್ಕೃತಿ ರಾಜ್ಯ ಸಚಿವರು):

ಅ) 1) ಹೌದು

2) 23 ಜನ ಕಲಾವಿದರು

3) 16 ನೌಕರರು

4) ಕನ್ನಡ ರಂಗಭೂಮಿಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಉನ್ನತ ಮಾದರಿಯಾಗುವಂತೆ ರೂಪಿಸಲು ಮತ್ತು ರಂಗಾಯಣವನ್ನು ರಾಜ್ಯಮಟ್ಟದ ಪ್ರಾತಿನಿಧಿಕ ರೆಪರ್ಟರಿಯನ್ನಾಗಿ ಮಾಡುವ ಉದ್ದೇಶದಿಂದ ಸ್ಥಾಪಿಸಲಾಗಿದೆ.